ಅಧ್ಯಕ್ಷರು: ಈಗ ಬೇಡಿಕೆ ಮೇಲೆ ಚರ್ಚೆ ಮಾಡುವವರು ಯಾರಿದ್ದೀರಿ, ಮಾಡಿ. ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತಿದ್ದೇನೆ. ಮಾಡಿ.

(ವಿರೋಧ ಪಕ್ಷದ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಯಾವುದೇ ವಿಚಾರವನ್ನಾದರೂ ಕೂಡ, ಇದನ್ನು ಎಲ್ಲಿಯವರೆಗೆ ತೆಗೆದುಕೊಂಡು ಹೋಗಬಹುದು?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಹಣ ಇಲ್ಲ ಏನೂ ಇಲ್ಲ, ಹಣ ಇಲ್ಲದೆ ಮಾನ್ಯ ಮಂತ್ರಿಯವರು ಹೇಗೆ ಸರಿಮಾಡುತ್ತಾರೆ?

(ಗೊಂದಲ)

(ಮಾನ್ಯ ಸದಸ್ಯರಾದ ಕಾಗೇರಿಯವರು ಸದನದ ಬಾವಿಯಿಂದ ಮಾತನಾಡಿದರು)

ಶ್ರೀ ಎಂ.ಹೆಚ್. ಅಂಬರೀಶ್ (ವಸತಿ ಸಚಿವರು): ಕಾಗೇರಿಯವರೆ, ನಿಮಗೆ ಆಗಲೇ ನಾನು ಹೇಳಿದನಲ್ಲ. ನಿಮಗೆ ಎಷ್ಟು ಬೇಕು, ನಿಮ್ಮ ಅವಶ್ಯಕತೆ ಎಷ್ಟಿದೆ ಎಂದು ಕೊಡಿ, ನಾನು ನನ್ನ ಬಜೆಟ್ ಅನ್ನು ನೋಡಿಕೊಂಡು, ಜೊತೆಗೆ ಎಷ್ಟು ಕೊಡುವುದಕ್ಕೆ ಸಾಧ್ಯವಿದೆ, ಅಷ್ಟನ್ನೂ ನಿಮಗೆ ಮಾಡಿಕೊಡುತ್ತೇನೆ, ನಿಮಗೆ ಅನ್ಯಾಯವಾಗದಿದ್ದ ಹಾಗೆ ಎಂದು ಹೇಳಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್: ಬಜೆಟ್ ಇಲ್ಲವಲ್ಲ.

(ಗೊಂದಲ)

ಶ್ರೀ ಎಂ.ಹೆಚ್. ಅಂಬರೀಶ್: ಕೊಡೋಲ್ಲ ಎಂದು ನಾನು ಹೇಗೆ ಹೇಳುವುದಕ್ಕೆ ಸಾಧ್ಯ? 15 ಲಕ್ಷ ಮನೆಯನ್ನೂ ಕಾಂಗ್ರೆಸ್‌ನವರೇ ಕಟ್ಟುತ್ತಾರೆಯೇ? ಕಟ್ಟುವುದಿಲ್ಲ. ನೀವೂ ಕಟ್ಟಬೇಕಾಗುತ್ತದೆ. ನಿಮಗೂ ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಎಂ.ಹೆಚ್. ಅಂಬರೀಶ್: ಇದನ್ನು ನಾನು ಕೊಡುತ್ತೇನೆಂದು ಹೇಳಿದ ಮೇಲೆ ಸ್ವಲ್ಪ ವಿಶ್ವಾಸ ನಮ್ಮ ಮೇಲೂ ಇರಲಿ. ಎಲ್ಲರಿಗೂ ಕೊಡುತ್ತೇನೆಂದು ಹೇಳಿದ್ದೇನೆ. ನಿಮಗೆಲ್ಲರಿಗೂ ನಿಮ್ಮ ಬೇಡಿಕೆ ಏನಿದೆ ಕೊಡುತ್ತೇನೆ, ಬಿಡಿ ಅದನ್ನು, ನೀವು ಅಕಸ್ಮಾತ್